## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕಾಶೀನಾಥ ಜಡಗೆ ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹಲಬರ್ಗಾ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಮತ್ತು ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರುಗಳ ವಿರುದ್ಧ ಲೋಕಾಯುಕ್ತ ವಿಚಾರಣೆ- ಅಂತಿಮ ಆದೇಶ ಹೊರಡಿಸುವ ಕುರಿತು – ಆದೇಶ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/680/ಗ್ರಾಪಂಅ/2007, ದಿನಾಂಕ:07-11-2007.
2. ಅಪರ ನಿಬಂಧಕರು ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ: LOK-ARE-3/Enq-34/2007-08 ದಿನಾಂಕ: 11-08-2015.
3. ಮಾನ್ಯ ಉಪಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: LOK-ARE-3/Enq-34/2007-08 , ದಿನಾಂಕ: 14-08-2017.
4. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/446/ಗ್ರಾಪಂಕಾ/2015, ದಿನಾಂಕ: 18-09-2015.
5. ಶ್ರೀ ಕಾಶೀನಾಥ ಜಡಗೆ ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:31-05-2017.
6. ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ:31-05-2017.
7. ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬೀದರವರ ಪತ್ರ ಸಂಖ್ಯೆ:ಜಿಪಂಬೀ/ಸಿಬ್ಬಂದಿ-2/ಸಿಆರ್-30/2007-08 ದಿನಾಂಕ: 01-06-2017.
8. ಮಾನ್ಯ ಉಪಲೋಕಾಯುಕ್ತ-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪರಿಷ್ಕೃತ ಶಿಫಾರಸ್ಸು ಸಂಖ್ಯೆ; LOK-ARE-3/Enq-34/2007/ARE-3 ದಿನಾಂಕ: 09-08-2017.
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,(ಸೇವೆಗಳು-ಬಿ) ಪತ್ರ ಸಂಖ್ಯೆ:ಲೋಇ:149:ಸೇವಿಇ:2017 ದಿನಾಂಕ:08-08-2017.

**ಪ್ರಸ್ತಾವನೆ :**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 1)ಶ್ರೀ ಕಾಶೀನಾಥ ಜಡಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹಲಬರ್ಗಾ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, 2)ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಮತ್ತು 3)ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-A ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11(9)ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

1. "ಶ್ರೀ ಕಾಶೀನಾಥ ಜಡಗೆ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರು ಹಲಬರ್ಗಾ ಗ್ರಾಮದಲ್ಲಿ 2006-07ನೇ ಸಾಲಿನ ಇಜಿಎಸ್ ಯೋಜನೆಯಡಿಯಲ್ಲಿ ಅಂಬೇಡ್ಕರ್ ವೃತ್ತದಿಂದ ಸಮುದಾಯ ಭವನದ ವರೆಗಿನ

ರಸ್ತೆಯ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ರೂ.4,988/-ಗಳನ್ನು ಹೆಚ್ಚುವರಿಯಾಗಿ ಪಡೆದು ದುರುಪಯೋಗಪಡಿಸಿಕೊಂಡಿರುತ್ತಾರೆ.

2. ಶ್ರೀ ಕಾಶೀನಾಥ ಜಡಗೆ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರು ಹಲಬರ್ಗಾ ಗ್ರಾಮದಲ್ಲಿ 2006-07ನೇ ಸಾಲಿನ ಇಜಿಎಸ್ ಯೋಜನೆಯಡಿಯಲ್ಲಿ ಲಕ್ಷ್ಮೀ ದೇವಸ್ಥಾನದಿಂದ ಹನುಮಾನ್ ದೇವಸ್ಥಾನದವರೆಗೆ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಯಲ್ಲಿ ರೂ.23,921/-ಗಳನ್ನು ಹೆಚ್ಚುವರಿಯಾಗಿ ಪಡೆದು ದುರುಪಯೋಗಪಡಿಸಿಕೊಂಡಿರುತ್ತಾರೆ.
3. ಶ್ರೀ ಕಾಶೀನಾಥ ಜಡಗೆ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರು ತೆಗೆಂಪುರ್ ಗ್ರಾಮದಲ್ಲಿ 2006-07ನೇ ಸಾಲಿನ ಇಜಿಎಸ್ ಯೋಜನೆಯಡಿಯಲ್ಲಿ ಶಾಲೆ ಕಟ್ಟಡದಿಂದ ಪಿಡಬ್ಲ್ಯೂಡಿ ರಸ್ತೆಯವರೆಗೆ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಯಲ್ಲಿ ರೂ.896/-ಗಳನ್ನು ಹೆಚ್ಚುವರಿಯಾಗಿ ಪಡೆದು ದುರುಪಯೋಗ ಪಡಿಸಿಕೊಂಡಿರುತ್ತಾರೆ.
4. ಶ್ರೀ ಕಾಶೀನಾಥ ಜಡಗೆ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರು ತೆಗೆಂಪುರ್ ಗ್ರಾಮದಲ್ಲಿ 2006-07ನೇ ಸಾಲಿನ ಇಜಿಎಸ್ ಯೋಜನೆಯಡಿಯಲ್ಲಿ ಗೋವಿಂದರಾವ್ ಬಿರಾದಾರ್ ಮನೆಯಿಂದ ನಾಗಶೆಟ್ಟಿ ಬಿರಾದಾರ್ ಮನೆವರೆಗೆ ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಯಲ್ಲಿ ರೂ.7829/-ಗಳನ್ನು ಹೆಚ್ಚುವರಿಯಾಗಿ ಪಡೆದು ದುರುಪಯೋಗ ಪಡಿಸಿಕೊಂಡಿರುತ್ತಾರೆ.
5. ಶ್ರೀ ಕಾಶೀನಾಥ ಜಡಗೆ ಮತ್ತು ಶ್ರೀ ಪುರುಷೋತ್ತಮ ಪಾಟೀಲ್ ಇವರು ಹಲಬರ್ಗಾ ಗ್ರಾಮದಲ್ಲಿ 2005-06ನೇ ಸಾಲಿನ ಎಸ್‌ಜಿಆರ್‌ವೈ ಯೋಜನೆಯಡಿಯಲ್ಲಿ ಚಾವಡಿ ಕಟ್ಟೆ ನಿರ್ಮಾಣ ಕಾಮಗಾರಿಯಲ್ಲಿ ಸರ್ಕಾರಕ್ಕೆ ರೂ.7321/-ಗಳನ್ನು ನಷ್ಟ ಉಂಟು ಮಾಡಿರುತ್ತಾರೆ.
6. ಶ್ರೀ ಕಾಶೀನಾಥ ಜಡಗೆ, ಶ್ರೀ ಪುರುಷೋತ್ತಮ ಪಾಟೀಲ್ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರು ನಾಗಪುರ ಗ್ರಾಮದಲ್ಲಿ ಕೃಷಿಹೊಂಡದ ಮಣ್ಣು ತೆಗೆಯುವ ಕಾಮಗಾರಿಗೆ 2 ಬಾರಿ ವೆಚ್ಚ ಮಾಡಿ ರೂ.15,000/- ದುರುಪಯೋಗ ಪಡಿಸಿಕೊಂಡಿರುತ್ತಾರೆ.
7. ಶ್ರೀ ಕಾಶೀನಾಥ ಜಡಗೆ, ಶ್ರೀ ಪುರುಷೋತ್ತಮ ಪಾಟೀಲ್ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರು ಕೆಲವು ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಇಜಿಎಸ್ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡುವ ಬದಲು ಸೆಲ್ಫ್ ಚೆಕ್ ಮೂಲಕ ಹಣ ಡ್ರಾ ಮಾಡಿ ಜೊತೆಗೆ ಆಹಾರ ಧಾನ್ಯ ಮತ್ತು ಇತರೆ ಸಾಮಾಗ್ರಿಗಳ ಖರೀದಿಗೆ ನಿಯಮಬಾಹಿರವಾಗಿ ರೂ.9,12,706/- ಗಳನ್ನು ವೆಚ್ಚ ಮಾಡಿ ದುರ್ವರ್ತನೆ ಎಸಗಿರುತ್ತಾರೆ".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ವರದಿಯಲ್ಲಿ 1) ಶ್ರೀ ಕಾಶೀನಾಥ ಜಡಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹಲಬರ್ಗಾ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, 2) ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಮತ್ತು 3) ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರುಗಳ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ ಹಾಗೂ

ಶ್ರೀ ಕಾಶೀನಾಥ ಜಡಗೆ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರುಗಳ ಮೇಲಿನ ಆಪಾದನೆ ಸಂಖ್ಯೆ 1,2,3,4 ಇವುಗಳಿಗೆ ಸಂಬಂಧಪಟ್ಟಂತೆ ಒಟ್ಟು ರೂ.37,634/-ಗಳನ್ನು ಜಂಟಿಯಾಗಿ ಮರುಪಾವತಿಸಬೇಕಾಗಿರುತ್ತದೆ.

ಶ್ರೀ ಕಾಶೀನಾಥ ಜಡಗೆ ಮತ್ತು ಶ್ರೀ ಪುರುಷೋತ್ತಮ ಪಾಟೀಲ್ ಇವರುಗಳ ಮೇಲಿನ ಆಪಾದನೆ ಸಂಖ್ಯೆ 5 ಕ್ಕೆ ಸಂಬಂಧಪಟ್ಟಂತೆ ಒಟ್ಟು ರೂ.7321/-ಗಳನ್ನು ಜಂಟಿಯಾಗಿ ಮರುಪಾವತಿಸಬೇಕಾಗಿರುತ್ತದೆ.

ಶ್ರೀ ಕಾಶೀನಾಥ ಜಡಗೆ, ಶ್ರೀ ಪುರುಷೋತ್ತಮ ಪಾಟೀಲ್ ಮತ್ತು ಶ್ರೀ ಗುಲಾಬ್ ಕಾಂಬಳೆ ಇವರುಗಳ ಮೇಲಿನ ಆಪಾದನೆ ಸಂಖ್ಯೆ 6 ಮತ್ತು 7 ಕ್ಕೆ ಸಂಬಂಧಪಟ್ಟಂತೆ ಒಟ್ಟು ರೂ.59,359/-ಗಳನ್ನು ಜಂಟಿಯಾಗಿ ಮರುಪಾವತಿಸಬೇಕಾಗಿರುತ್ತದೆ ಎಂದು ತಮ್ಮ ವಿಚಾರಣಾ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಿರುತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರು ಅಂಗೀಕರಿಸಿ 1) ಶ್ರೀ ಕಾಶೀನಾಥ ಜಡಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹಲಬರ್ಗಾ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, 2) ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಮತ್ತು 3) ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ

ಅನುಗುಣವಾಗಿ, ಶ್ರೀ ಕಾಶೀನಾಥ ಜಡಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹಲಬರ್ಗಾ ಗ್ರಾಮ ಪಂಚಾಯತಿ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.42,264/–ಗಳನ್ನು ವಸೂಲಿ ಮಾಡುವಂತೆ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(iii)ರ ಅನ್ವಯ **"ಸದರಿ ನೌಕರರ ಮೂರು ವಾರ್ಷಿಕ ವೇತನ ಬಡ್ತಿಯನ್ನು ನಿರಂತರವಾಗಿ ತಡೆಹಿಡಿಯುವಂತೆ"** ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.23,447/–ಗಳನ್ನು ವಸೂಲಿ ಮಾಡುವಂತೆ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(iii)ರ ಅನ್ವಯ **"ಸದರಿ ನೌಕರರ ಮೂರು ವಾರ್ಷಿಕ ವೇತನ ಬಡ್ತಿಯನ್ನು ನಿರಂತರವಾಗಿ ತಡೆಹಿಡಿಯುವಂತೆ"** ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.38,603/–ಗಳನ್ನು ವಸೂಲಿ ಮಾಡುವಂತೆ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(iii)ರ ಅನ್ವಯ **"ಸದರಿ ನೌಕರರ ಮೂರು ವಾರ್ಷಿಕ ವೇತನ ಬಡ್ತಿಯನ್ನು ನಿರಂತರವಾಗಿ ತಡೆಹಿಡಿಯುವಂತೆ"** ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ 1) ಶ್ರೀ ಕಾಶೀನಾಥ ಜಡಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹಲಬರ್ಗಾ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ, 2) ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಮತ್ತು 3) ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (4) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟೀಸಿಗೆ ಶ್ರೀ ಕಾಶೀನಾಥ ಜಡಗೆ ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮೇಲೆ ಕ್ರಮ ಸಂಖ್ಯೆ (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ಶ್ರೀ ಕಾಶೀನಾಥ ಜಡಗೆ, ಕಾರ್ಯದರ್ಶಿ ರವರು ಬೀದರ್ ಜಿಲ್ಲೆ, ಭಾಲ್ಕಿ ತಾಲ್ಲೂಕು ಹಲಬರ್ಗಾ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿ ದಿನಾಂಕ:30-06-2013 ರಂದು ವಯೋ ನಿವೃತ್ತಿ ಹೊಂದಿರುವುದಾಗಿ ತಿಳಿಸುತ್ತಾ, ಕರ್ತವ್ಯ ನಿರ್ವಹಿಸುವ ವೇಳೆ ಲೋಪದೋಷಗಳು ಉಂಟಾಗಿದ್ದು, ಯಾವುದೇ ಅವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲವೆಂದು ಹಾಗೂ ಈಗಾಗಲೇ ನಿವೃತ್ತಿ ಹೊಂದಿದ್ದು ಅನಾರೋಗ್ಯದ ಕಾರಣ ಲೋಕಾಯುಕ್ತರವರು ಶಿಫಾರಸ್ಸು ಮಾಡಿರುವ ಶಿಕ್ಷೆಯಿಂದ ಮುಕ್ತ ಮಾಡುವಂತೆ" ಕೋರಿರುತ್ತಾರೆ.

ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಆಪಾದಿತ ನೌಕರರು ಸರ್ಕಾರದ 2ನೇ ಕಾರಣ ಕೇಳುವ ನೋಟಿಸಿಗೆ ನೀಡಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ಶ್ರೀ ಪುರುಷೋತ್ತಮ ಪಾಟೀಲ್ ರವರು ಕಿರಿಯ ಇಂಜಿನಿಯರ್ ಆಗಿ 2005-2006 ಅವಧಿಯಲ್ಲಿ ಸದರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಕೆಲಸದ ಒತ್ತಡದಿಂದ ಕೆಲವವು ಲೋಪದೋಷಗಳು ಕಣ್ತಪ್ಪಿನಿಂದ ಉಂಟಾಗಿದ್ದು ಇದರಲ್ಲಿ ಯಾವುದೇ ದುರುದ್ದೇಶ ಇರುವುದಿಲ್ಲ. ವಿಚಾರಣಾ ವರದಿಯಲ್ಲಿನ ಚಾರ್ಜ್ ನಂ.5 ರಲ್ಲಿ ಹಲಬುರ್ಗಾ ಗ್ರಾಮದಲ್ಲಿ ಚೌಡಿ ಕಟ್ಟೆಯನ್ನು ನಿರ್ಮಿಸುವ ಕಮಗಾರಿಯ ನಿರ್ವಹಣೆಯನ್ನು ತಾನು ಮಾಡಿದ್ದು ಇನ್ನುಳಿದ ಚಾರ್ಜ್

ನಂ.1 ರಿಂದ 4 ಮತ್ತು 6 ರಿಂದ 7 ರಲ್ಲಿ ನಮೂದಾಗಿರುವ ಕಾಮಗಾರಿಗಳನ್ನು ತಾನು ನಿರ್ವಹಿಸಿರುವುದಿಲ್ಲ. ಆದ್ದರಿಂದ ವಿಚಾರಣಾಧಿಕಾರಿಗಳ ವರದಿ ಮತ್ತು ಆದೇಶವು ದೋಷಪೂರಿತವಾಗಿವೆ. ಇದನ್ನು ಸರಿಪಡಿಸುವಂತೆ ಹಾಗೂ ಮಾನ್ಯ ಉಪಲೋಕಾಯುಕ್ತರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವ ಶಿಕ್ಷೆಯ ಪ್ರಮಾಣವು ಹೆಚ್ಚಾಗಿದ್ದು ಇದನ್ನು ಮನ್ನಾ ಮಾಡುವಂತೆ ಹಾಗೂ ವಿಚಾರಣಾ ವರದಿ ಮತ್ತು ಆದೇಶದಲ್ಲಿ ಆಗಿರುವ ತಪ್ಪನ್ನು ಸರಿಪಡಿಸುವಂತೆ ಕೋರಿರುತ್ತಾರೆ".

ಶ್ರೀ ಗುಲಾಬ್ ಕಾಂಬಳೆಯವರು ದಿನಂಕ:13-01-2014 ರಂದು ನಿಧನ ಹೊಂದಿರುವುದಾಗಿ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಬೀದರವರು ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ.

ಶ್ರೀ ಕಾಶೀನಾಥ ಜಡಗೆಯವರು ದಿನಾಂಕ:30-06-2013 ರಂದು ವಯೋನಿವೃತ್ತಿ ಹೊಂದಿರುವುದರಿಂದ ಸದರಿ ನೌಕರರ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವ ದಂಡನೆಯನ್ನು ಪರಿಷ್ಕರಿಸುವ ಬಗ್ಗೆ ಮಾನ್ಯ ಉಪಲೋಕಾಯುಕ್ತರವರಿಗೆ ಕೋರಲಾಗಿ ಮೇಲೆ ಓದಲಾದ ಕ್ರಮ ಸಂಖ್ಯೆ (8) ರಲ್ಲಿ ಮಾನ್ಯ ಉಪಲೋಕಾಯುಕ್ತ-1 ರವರು **"ಶ್ರೀ ಕಾಶೀನಾಥ ಜಡಗೆ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ಇವರ ನಿವೃತ್ತಿ ಉಪಲಬ್ಧಗಳಿಂದ ವಸೂಲಿ ಮಾಡುವಂತೆ ಮತ್ತು ಇವರ ನಿವೃತ್ತಿ ವೇತನದಲ್ಲಿ ಶೇಖಡ 5% ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವಂತೆ"** ಪರಿಷ್ಕೃತ ದಂಡನೆ ಶಿಫಾರಸ್ಸು ಮಾಡಿರುತ್ತಾರೆ.

"ಶ್ರೀ ಪುರುಷೋತ್ತಮ ಪಾಟೀಲ್ ಮತ್ತು ಗುಲಾಬ್ ಕಾಂಬಳೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ನೌಕರರಾಗಿದ್ದು, ಸದರಿನೌಕರರಿಗೆ ಲೋಕಾಯುಕ್ತರವರು ಶಿಫಾರಸ್ಸು ಮಾಡಿರುವ ದಂಡನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೇ ವಿಧಿಸಬಹುದಾಗಿದೆ ಎಂದು ಮೇಲೆ ಓದಲಾದ ಕ್ರಮ ಸಂಖ್ಯೆ (9) ರಲ್ಲಿ ತಿಳಿಸಿರುತ್ತಾರೆ.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀವ್ರತೆಗೆ ಅನುಗುಣವಾಗಿ ಶ್ರೀ ಕಾಶೀನಾಥ ಜಡಗೆ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.42,264/-ಗಳನ್ನು ಇವರ ನಿವೃತ್ತಿ ಉಪಲಬ್ಧಗಳಿಂದ ವಸೂಲಿ ಮಾಡುವಂತೆ ಮತ್ತು ಇವರ ನಿವೃತ್ತಿ ವೇತನದಲ್ಲಿ ಶೇಖಡ 5% ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.23,447/-ಗಳನ್ನು ವಸೂಲಿ ಮಾಡುವಂತೆ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(iii)ರ ಅನ್ವಯ **"ಸದರಿ ನೌಕರರ ಮೂರು ವಾರ್ಷಿಕ ವೇತನ ಬಡ್ತಿಯನ್ನು ನಿರಂತರವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.38,603/-ಗಳನ್ನು ವಸೂಲಿ ಮಾಡುವಂತೆ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(iii)ರ ಅನ್ವಯ **"ಸದರಿ ನೌಕರರ ಮೂರು ವಾರ್ಷಿಕ ವೇತನ ಬಡ್ತಿಯನ್ನು ನಿರಂತರವಾಗಿ ತಡೆಹಿಡಿಯುವಂತೆ"** ಶಿಫಾರಸ್ಸು ಮಾಡಿರುತ್ತಾರೆ.

ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತದೆ. ಆದುದರಿಂದ ಶ್ರೀ ಕಾಶೀನಾಥ ಜಡಗೆ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಇವರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಹೇಳಿಕೆ ಸಮರ್ಥನೀಯವಲ್ಲವೆಂದು ಕಂಡುಬಂದಿರುತ್ತದೆ ಮತ್ತು ಪರಿಗಣಿಸುವ

ಯಾವುದೇ ಅಂಶಗಳು ಕಂಡುಬಂದಿರುವುದಿಲ್ಲ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ, ಶ್ರೀ ಕಾಶೀನಾಥ ಜಡಗೆ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.42,264/-ಗಳನ್ನು ಇವರ ನಿವೃತ್ತಿ ಉಪಲಬ್ಧಗಳಿಂದ ವಸೂಲಿ ಮಾಡಲು ಮತ್ತು ಇವರ ನಿವೃತ್ತಿ ವೇತನದಲ್ಲಿ ಶೇಖಡ 5% ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸಲು ನಿರ್ಣಯಿಸಿದೆ.

ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.23,447/-ಗಳನ್ನು ವಸೂಲಿ ಮಾಡಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(iii)ರ ಅನ್ವಯ **"ಸದರಿ ನೌಕರರ ಮೂರು ವಾರ್ಷಿಕ ವೇತನ ಬಡ್ತಿಯನ್ನು ನಿರಂತರವಾಗಿ ತಡೆಹಿಡಿಯುವ"** ದಂಡನೆ ವಿಧಿಸಲು ನಿರ್ಣಯಿಸಿದೆ.

ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ ಇವರು ಮೃತಪಟ್ಟಿರುವುದರಿಂದ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.38,603/-ಗಳನ್ನು ಇವರಿಗೆ ಸಲ್ಲಬೇಕಾದ ನಿವೃತ್ತಿ ಸೌಲಭ್ಯ ಮತ್ತು ಡಿ.ಸಿ.ಆರ್.ಜಿ.ಗಳಿಂದ ವಸೂಲಿ ಮಾಡಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/410/ಗ್ರಾಪಂಕಾ/2017, ಬೆಂಗಳೂರು, ದಿನಾಂಕ: 18-12-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಕಾಶೀನಾಥ ಜಡಗೆ, ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ **"ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ.42,264/-ಗಳನ್ನು ಇವರ ನಿವೃತ್ತಿ ಉಪಲಬ್ಧಗಳಿಂದ ವಸೂಲಿ ಮಾಡಲು ಮತ್ತು ಇವರ ನಿವೃತ್ತಿ ವೇತನದಲ್ಲಿ ಶೇಖಡ 5% ರಷ್ಟನ್ನು ಶಾಶ್ವತವಾಗಿ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ **"ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.23,447/-ಗಳನ್ನು ವಸೂಲಿ ಮಾಡಲು"** ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ನಿಯಮ 8(iii)ರ ಅನ್ವಯ **"ಸದರಿ ನೌಕರರ ಮೂರು ವಾರ್ಷಿಕ ವೇತನ ಬಡ್ತಿಯನ್ನು ನಿರಂತರವಾಗಿ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ದಿವಂಗತ ಶ್ರೀ ಗುಲಾಬ್ ಕಾಂಬಳೆ, ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ **"ಇವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟ ರೂ.38,603/-ಗಳನ್ನು ಇವರಿಗೆ ಸಲ್ಲಬೇಕಾದ ನಿವೃತ್ತಿ ಸೌಲಭ್ಯ ಮತ್ತು ಡಿ.ಸಿ.ಆರ್.ಜಿ.ಗಳಿಂದ ವಸೂಲಿ ಮಾಡುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

18/12

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ-1 ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3.ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4.ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

5.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಜಿಲ್ಲೆ.

6.ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಭಾಲ್ಕಿ, ಬೀದರ್ ಜಿಲ್ಲೆ.

7.ಶ್ರೀ ಕಾಶೀನಾಥ ಜಡಗೆ ನಿವೃತ್ತ ಗ್ರಾಮ ಪಂಚಾಯತಿ ಕಾರ್ಯದರ್ಶಿ, ಹಲಬರ್ಗಾ ಗ್ರಾಮ ಪಂಚಾಯತಿ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ.

8.ಶ್ರೀ ಪುರುಷೋತ್ತಮ ಪಾಟೀಲ್ ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ

9.ಶ್ರೀ ಗುಲಾಬ್ ಕಾಂಬಳೆ( ಲೇಟ್) ಕಿರಿಯ ಇಂಜಿನಿಯರ್ ಜಿಲ್ಲಾ ಪಂಚಾಯತ್ ಉಪ ವಿಭಾಗ, ಭಾಲ್ಕಿ, ಬೀದರ್ ಜಿಲ್ಲೆ

10. ಗಣಕ ಕೋಶ

11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.